†ಶ್ರೀ ಕೆ. ಮಲ್ಲಪ್ಪ.—ಉತ್ಪನ್ನ ಅಲ್ಲಿ ಇನ್ನೂ ಪ್ರಾರಂಭವಾಗಿಲ್ಲ, ಆದಕ್ಕೆ ಪೂರ್ವಭಾವೀ ಸಿದ್ಧತೆಗಳಾಗುತ್ತಿವೆ.

ಶ್ರೀ ಸಿ. ಆರ್. ರಂಗೇಗೌಡ.—ಮೂರು ವರ್ಷಗಳ ಒಪ್ಪಂದದ ಮೇಲೆ ಬಂದಿದ್ದಾರೆಂದು ಹೇಳಿದ್ದೀರಿ, ಅವರು ಮೈಸೂರು ರಾಜ್ಯಕ್ಕೆ ಬಂದದ್ದು ಯಾವಾಗ ?

ಶ್ರೀ ಕೆ. ಮಲ್ಲಪ್ಪ.—ಉತ್ತರದ ಪರಿಶಿಷ್ಟದಲ್ಲಿ ವಿವರವನ್ನು ಕೊಟ್ಟಿದೆ.

ಶ್ರೀ ಸಿ. ಆರ್. ರಂಗೇಗೌಡ.—ಒಪ್ಪಂದ ಇರುವುದು 3 ವರ್ಷಕ್ಕೆ, ಮೊದಲು ಡಿಸೈನ್ ಆಗಿ ಅಮೇಲೆ ಉತ್ಪನ್ನ ಪ್ರಾರಂಭವಾಗಬೇಕು; ಆದರೆ ಈಗಾಗಲೆ ಡಿಸೈನ್ ಮತ್ತು ಪ್ರೊಡಕ್ಷನ್ ಇಂಜಿನಿಯರುಗಳು ಬಂದಿದ್ದಾರೆ. ಈಗಾಗಲೇ ಒಪ್ಪಂದದ ಅವಧಿಯಲ್ಲಿ ಅರ್ಧಕಾಲ ಮುಗಿದಿದೆ, ಈಗ ಡಿಸೈನ್ ಆಗುತ್ತಿದೆ ಆದರೆ ಪ್ರೊಡಕ್ಷನ್ ಇಂಜಿನಿಯರುಗಳೂ ಬಂದಿದ್ದಾರೆ, ಇವರು ಈಗೇನೂ ಕೆಲಸ ಮಾಡುವ ಹಾಗಿಲ್ಲ ಡಿಸೈನ್ ಮುಗಿಯುವವರೆಗೆ, ಇದರಿಂದ ಸರಕಾರಕ್ಕೆ ನಷ್ಟವಾ ಗುವುದಿಲ್ಲವೆ ?

ಶ್ರೀ ಕೆ. ಮಲ್ಲಪ್ಪ.—ಅವರು ಮನಸ್ಸಿಗೆ ಬಂದ ಹಾಗೆ ಬರುವುದಿಲ್ಲ, ಫೇಸ್ಡ್ ಪ್ರೋಗ್ರಾಂ ಪ್ರಕಾರ ಅವರನ್ನು ಬರಮಾಡಿಕೊಳ್ಳುತ್ತಿದ್ದೇವೆ. ಇಲ್ಲಿನವರಿಗೆ ಟ್ರೈನಿಂಗ್ ಕೂಡ ಆಗುತ್ತಿದೆ. ಮೂರು ವರ್ಷಕ್ಕೆ ಅವರು ವಾಪಸು ಹೋದ ಮೇಲೆ ನಮ್ಮ ಜನರೇ ಕೆಲಸ ಮಾಡುತ್ತಾರೆ.

Sri G. V. GOWDA.—What is the duration of the training period ?

ಶ್ರೀ ಕೆ. ಮಲ್ಲಪ್ಪ.—ಬಾಕೀ ಪೋಸ್ಟ್‌ಗಳಿಗೆ ಬೇಕಾಗುವ 63 ಜನರಲ್ಲಿ 33 ಜನರು ಟ್ರೈನಿಂಗ್ ಆಗಿ ಬಂದಿದ್ದಾರೆ.

ಶ್ರೀ ಟಿ. ಮಾದಯ್ಯ ಗೌಡ.—ಜರ್ಮನಿಗೆ ನಮ್ಮ ಜನರನ್ನು ಕಳುಹಿಸಿ ಶಿಕ್ಷಣ ಪಡೆದು ಅವರು ಬಂದಿದ್ದಾರೆ, ಅವರ ಕೆಲಸ ಕಾರ್ಯ ಹೇಗೆ ನಡೆಯುತ್ತಿದೆ ?

ಶ್ರೀ ಕೆ. ಮಲ್ಲಪ್ಪ.—63 ಜನರ ಪೈಕಿ 33 ಜನರು ಶಿಕ್ಷಣವನ್ನು ಮುಗಿಸಿಕೊಂಡು ಯಶಸ್ವಿ ಯಾಗಿ ಬಂದಿದ್ದಾರೆ, ಕೆಲಸ ನಡೆಯುತ್ತಿದೆ.

Mr. SPEAKER.—I go back to the questions that were pssed over.

Sri H. R. KESHAVA MURTHY.—Sir, Question No. 246 is an important question and so it can be put by the Chair.

Mr. SPEAKER.—I put Question Nos. 246 and 247 since both are identical. Both the questions are open for supplementaries.

Construction of Gorur Dam across Hemavathi River.

*Q.—246. Sri S. A. VASANNA SETTY (Saklespur).—

Will the Government be pleased to state :—

(*a*) the date on which technical clearance was obtained for Gorur Dam across Hemavathi River ;

(*b*) whether they propose to complete construction of both the stages of the project simultaneously ;

(*c*) the maximum height of the dam as per plan of the reservoir ;

(*d*) whether any revised estimate and plan has been prepared in this behalf ;

(*e*) the amount sanctioned for the project during 1963-64 and total amount spent so far ?

*A.—Sri VEERENDRA PATIL (Minister for Public Works [on behalf of Sri S. NIJALINGAPPA (Chief Minister)].—

(*a*) Technical clearance is still awaited.

(*b*) First stage only.

(SRI VEERENDRA PATIL)

(*c*) 121 ft.
(*d*) No.
(*e*) A preliminary estimate amounting to Rupees 26.85 lakha has been recently sanctioned.

Plans and Estimates of Gorur Dam.

*Q—247. Sri S. A. VASANNA SETTY (Saklespur).—

Will the Government be pleased to state.—

(*a*) whether it is a fact that plans and estimates of Gorur Dam were returned with some queries for techuical clearance from Government of India;

(*b*) if so, the nature of queries and the replies sent by the State Government?

A.—Sri VEERENDRA PATIL (Minister for Public Works) [on behalf of Sri S. NIJALINGAPPA (Chief Minister)].—

(*a*) No.
(*b*) Does not arise in view of reply to (*a*) above.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಗೊರೂರು ಅಣೆಕಟ್ಟಿನ ಮೊದಲ ಎತ್ತರವೆಷ್ಟು? ಅದನು ವ್ಯತ್ಯಾಸ ಮಾಡುವುದಕ್ಕೆ ಕಾರಣವೇನು?

†ಶ್ರೀ ವೀರೇಂದ್ರಪಾಟೀಲ್.—ಎರಡು ಸ್ಟೇಜುಗಳಲ್ಲಿ ಈ ಯೋಜನೆಯನ್ನು ತೆಗೆದುಕೊಳ್ಳ ಬೇಕೆಂದು ಸರಕಾರದ ವಿಚಾರವಿದ, ಅಖೈರಾಗಿ 121 ಅಡಿ ಎತ್ತರ ಬರುತ್ತದೆ. ಮೊದಲು ಯಾವುದೋ ಇತ್ತು ಅದನ್ನು ಬದಲಾವಣೆ ಮಾಡಿದ್ದಾರೆಂದು ಹೇಳಿದಿರಿ, ಆ ಸಮಾಚಾರ ನನ್ನಲ್ಲಿಲ್ಲ. ಅದರ ಎತ್ತರ 121 ಅಡಿ ಇದು 7.2 ಟಿ.ಎಂ.ಸಿ.ಎಫ್‌ಟಿ. ಸ್ಟೋರೇಜ್ ಕೆಪ್ಯಾಸಿಟಿ, ಒಟ್ಟು ನೀರಾವರಿ ಯಾಗುವುದು 16 ಸಾವಿರ ಎಕರೆ. ಅದರಲ್ಲಿ 6 ಸಾವಿರ ಬತ್ತದ ಬೆಳೆಗೆ ಮತ್ತು 11 ಸಾವಿರ ಕಬ್ಬಿನ ಬೆಳೆಗೆ ಅನುಕೂಲವಾಗುತ್ತದೆ, ಮೊದಲ ಹಂತದಲ್ಲಿ. ಎರಡನೆಯ ಹಂತದಲ್ಲಿ ಕೆಪ್ಯಾಸಿಟಿ 11.2 ಟಿ. ಎಂ.ಸಿ.ಎಫ್‌ಟಿ. ಒಟ್ಟು 32 ಸಾವಿರ ಎಕರೆ ಅಚ್ಚುಕಟ್ಟಿನಲ್ಲಿ 6 ಸಾವಿರ ಸೆಮಿ ಡ್ರೈ ಮತ್ತು 11 ಸಾವಿರ ಎಕರೆ ಕಬ್ಬಿನ ಬೆಳೆಗೆ ನೀರು ಕೊಡಲಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಎರಡು ಕಾಲುವೆಗಳನ್ನು ಮಾಡಬೇಕೆಂದಿದ್ದೀರಾ?

ಶ್ರೀ ವೀರೇಂದ್ರ ಪಾಟೀಲ್.—ಆ ವಿವರಗಳು ಈಗ ನನ್ನಲ್ಲಿಲ್ಲ. ಬೇರೆ ಪ್ರಶ್ನೆ ಹಾಕಿದರೆ ಉತ್ತರ ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—121 ಅಡಿ ಎತ್ತರ ಕಟ್ಟಿದರೆ ಮುಳುಗಡೆ ಎಷ್ಟಾಗುತ್ತದೆ? ಸಕಲೇ ಶಪುರ ಮುಳುಗಡೆಯಾಗುತ್ತದಯೇ?

ಶ್ರೀ ವೀರೇಂದ್ರ ಪಾಟೀಲ್.—ನನ್ನಲ್ಲಿ ಆ ವಿವರಗಳಿಲ್ಲ.

Sri S. SIVAPPA.—When does the Government contemplate taking up the second stage work?

Sri VEERENDRA PATIL.—After the first stage is completed.

ಶ್ರೀ ಎಚ್. ಡಿ. ದೇವೇಗೌಡ.—ಎರಡು ಹಂತಗಳ ಯೋಜನೆ ಎಂದು ಹೇಳಿದಿರಿ, ಇದನ್ನು ಕಾರ್ಯಗತ ಮಾಡಿದರೆ ಒಟ್ಟು ಎಷ್ಟು ವೆಚ್ಚವಾಗುತ್ತದೆ ಮತ್ತು ಅದಕ್ಕೆ ಪೂರ್ವಭಾವಿಕಾರ್ಯಕ್ರಮ ಗಳನ್ನು ಏನು ಕೆಗೆದು ಕೊಂಟಿದ್ದೀರಿ?

ಶ್ರೀ ವೀರೇಂದ್ರ ಪಾಟೀಲ್.—ಮೊದಲ ಹಂತಕ್ಕೆ 390 ಲಕ್ಷ ರೂಪಾಯು ಖರ್ಚಾಗುತ್ತದೆ, ಎರಡನೆಯ ಹಂತಕ್ಕೆ ಎಷ್ಟಾಗುತ್ತದೆ ಎಂಬ ಬಗ್ಗೆ ವಿವರ ನನ್ನಲ್ಲಿಲ್ಲ. ಅಂದಾಜನ್ನು ಕೇಂದ್ರ ವಾಟರ್